**ಸಾಕ್ಷಿಯನ್ನು ಪ್ರಮಾಣ ವಚನ ಬೋದಿಸಲಾದ ದಿನಾಂಕಃ 09-02-2024**

**ದಾಖಲೆಗಳನ್ನು ಗುರುತಿಸುವುದಕ್ಕಾಗಿ ಮುಖ್ಯ ವಿಚಾರಣೆಃ ಪ್ರತಿವಾದಿ ಪರ ಶ್ರೀ. ವಿ ಎನ್ ಪಿ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಚಾರಗಳು ನನಗೆ ಗೋತ್ತಿದ್ದು, ಅವುಗಳು ಸತ್ಯವಾಗಿವೆ ಮತ್ತು ಅದರಲ್ಲಿರುವ ಸಹಿ ನನ್ನದೆ ಆಗಿರುತ್ತದೆ.

1. ಸಾಕ್ಷಿಯು ತನ್ನ ಸಹಿಯನ್ನು ನಿಡಿ.22 ರಲ್ಲಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಡಿ.22(ಎ) ಅಂತಾ ಗುರುತಿಸಲಾಯಿತು.
2. ಸಾಕ್ಷಿಯು ತನ್ನ ಸಹಿಯನ್ನು ನಿಡಿ.24 ರಲ್ಲಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಡಿ.24(ಎ) ಅಂತಾ ಗುರುತಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ.ಆರ್ ಆರ್ ಕೆ ವಕೀಲರಿಂದಃ**

ನಾನು ಹಾಗೂ ಪ್ರತಿವಾದಿ ನಂ.2 ಮತ್ತು ಇನ್ನೊಬ್ಬ ಸಾಕ್ಷಿದಾರರಾದ ರವಿ ಬನೊಶಿ ಸ್ನೇಹಿತರು ಎಂದರೆ ನಿಜ. ಮನೆತನದ ವ್ಯವಹಾರಗಳನ್ನು ಪ್ರತಿವಾದಿ ನಂ.2 ರವರು ನೋಡಿಕೊಳ್ಳುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ವಾದಿ ಹಾಗೂ ಪ್ರತಿವಾದಿಗಳ ಮನೆತನದ ಒಟ್ಟು ಆಸ್ತಿಗಳ ಬಗ್ಗೆ ಗೊತ್ತಿಲ್ಲ ಆದರೆ ಖರೀದಿ ಆಗಿರುವ ಎರಡು ಆಸ್ತಿಗಳ ಕುರಿತು ಗೊತ್ತು. ನಾನು ಗ್ರಾಮ ಪಂಚಾಯತಿ ಸದಸ್ಯ ಹಾಗೂ ಊರಿನಲ್ಲಿ ಪಂಚಾಯತಿ ಹಾಗೂ ಹಿರಿತನ ಮಾಡುತ್ತೇನೆ ಎಂದರೆ ನಿಜ. ನಾನು ನ್ಯಾಯಾಲಯದಲ್ಲಿನ ದಾವೆಗಳಲ್ಲಿ ಸಾಕಷ್ಟು ಬಾರಿ ಸಾಕ್ಷಿ ನುಡಿದಿದ್ದೆನೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.2 ರವರು ಬಹಳ ವರ್ಷಗಳಿಂದ ಹುಬ್ಬಳ್ಳಿಯಲ್ಲಿ ವಾಸ ಇರುತ್ತಾರೆ ಎಂದರೆ ನಿಜ. ಅವರು ಕಸಮಳಗಿ ಗ್ರಾಮಕ್ಕೆ ಬಂದು ಹೋಗಿ ಮಾಡುತ್ತಾರೆ ಎಂದರೆ ನಿಜ. ಪ್ರತಿವಾದಿ ನಂ.2 ರವರು ತಮ್ಮ ತಂದೆ ತಾಯಿಯ ಆರೋಗ್ಯದ ಕಾಳಜಿ ವಹಿಸುತ್ತಿದ್ದರು ಹಾಗೂ ಮನೆಯ ಆಸ್ತಿಗಳ ವ್ಯವಹಾರಗಳನ್ನು

ನೋಡಿಕೊಳ್ಳುತ್ತಿದ್ದರು ಅಂದರೆ ನನಗೆ ಗೊತ್ತಿಲ್ಲ. ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ವಾದಿ ಹಾಗೂ ಪ್ರತಿವಾದಿಗಳ ಕುಟುಂಬದ ಬಗ್ಗೆ ಗೊತ್ತು ಎಂದು ಬರೆಸಿಲ್ಲ. ನಾನು ಕಸಮಳಗಿ ಗ್ರಾಮದಲ್ಲಿ ವಾಸ ಇದ್ದೇನೆ. ವಾದಿ ನಂ.1 ಮತ್ತು ಪ್ರತಿವಾದಿ ನಂ.5 ರವರು ಕಸಮಳಗಿ ಗ್ರಾಮದಲ್ಲಿ ಜಮೀನುಗಳನ್ನು ಸಾಗುವಳಿ ಮಾಡುತ್ತಾ ವಾಸ ಇದ್ದಾರೆ ಎಂದರೆ ನಿಜ. ವಾದಿ ಪ್ರತಿವಾದಿಗಳ ಹೊಲಗಳ ಉತ್ಪನ್ನ ಏನು ಇದೆ ಎಂದು ನನಗೆ ಗೊತ್ತಿಲ್ಲ. ವಾದಿ ಮತ್ತು ಪ್ರತಿವಾದಿಗಳು ತಮ್ಮ ಜಮೀನುಗಳಲ್ಲಿ ಏನು ಬೆಳೆ ಬೆಳೆಯುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿ ನಂ.2 ರವರು ತನ್ನ ಮನೆತನದ ವಿಷಯವನ್ನು ನನಗೆ ತಿಳಿಸಿಲ್ಲ. ಯಾವ ಊರಿನ ಎಷ್ಟು ಬೆಳೆ ಪ್ರತಿವಾದಿ ನಂ.2 ರವರ ಹೆಸರಿನಲ್ಲಿ ಕಾರ್ಖಾನೆಗಳಿಗೆ ಹೋಗಿವೆ ಎನ್ನುವ ವಿಷಯ ನನಗೆ ಗೊತ್ತಿಲ್ಲ. ನನಗೆ ಪ್ರತಿವಾದಿ ನಂ.2 ರವರು ತನಗೆ ಕಬ್ಬಿನ ಬೆಳೆಯಿಂದ ಎಷ್ಟು ಆದಾಯ ಬಂದಿದೆ ಎನ್ನುವ ವಿಷಯವು ತಿಳಿಸಿಲ್ಲ.

2. ಪ್ರತಿವಾದಿ ನಂ.2 ರವರು ಕುಲಕರ್ಣಿ ರವರಿಂದ ಜಮೀನುಗಳನ್ನು ಖರೀದಿಸಿದ್ದರು ಅವರ ಪೂರ್ಣ ಹೆಸರು ಹೇಳಲು ಬರುವುದಿಲ್ಲ. ಆರ ಎಸ್ ನಂ.82/2 ವಿಸ್ತೀರ್ಣ 1 ಎಕರೆ 33 ಗುಂಟೆ ಜಮೀನನ್ನು ರೂ.50,000/- ಗಳಿಗೆ ಖರೀದಿಸಿದ್ದರು ಅದರಂತೆ ಸರ್ವೆ ನಂ.82/1 ಎ ವಿಸ್ತೀರ್ಣ 3 ಎಕರೆ 15 ಗುಂಟೆ ಜಮೀನನ್ನು ರೂ.1,50,000/- ಗಳಿಗೆ ಖರೀದಿಸಿದ್ದರು. ಖರೀದಿ ಪತ್ರಕ್ಕೆ ನಾನು ಸಹಿ ಮಾಡಿದ್ದೆ ಬೇರೆ ಸಾಕ್ಷಿದಾರರು ಯಾರು ಗೊತ್ತಿಲ್ಲ. ಮಲ್ಲಪ್ಪರವರು ಆಸ್ತಿಗಳ ಖರೀದಿ

ಮಾಡುವುದಾದರೆ ಅವರಿಗೆ ಬರಲು ಆದರೆ ಅವರ ಖುದ್ದಾಗಿ ಪತ್ರಕ್ಕೆ ಸಹಿ ಮಾಡಲು ಬರುತ್ತಿದ್ದರು ಇಲ್ಲವಾದರೆ ಊರಿನ ಹಿರಿಯರಿಗೆ ಹೋಗಿ ಸಹಿ ಮಾಡಲು ಹೇಳುತ್ತಿದ್ದರು ಎಂದರೆ ಸರಿಯಲ್ಲ. ಸರ್ವೆ ನಂ.82/3 ಜಮೀನನ್ನು ಯಾರು ಯಾರಿಂದ ಎಷ್ಟು ಹಣಕ್ಕೆ ಯಾವಾಗ ಖರೀದಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ.44/2 ಮತ್ತು ಸರ್ವೆ ನಂ.210 ಜಮೀನುಗಳನ್ನು ಯಾರು ಯಾರಿಂದ ಎಷ್ಟು ಹಣಕ್ಕೆ ಯಾವಾಗ ಖರೀದಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ.

3. ವಾದಿ ಮತ್ತು ಪ್ರತಿವಾದಿಗಳ ನಡುವೆ ಕುಟುಂಬದ ಆಸ್ತಿಗಳಲ್ಲಿ ಪಾಲು ಆಗಿದೆ ಅಥವಾ ಇಲ್ಲ ನನಗೆ ಗೊತ್ತಿಲ್ಲ. ವಾದಿ ಹಾಗೂ ಪ್ರತಿವಾದಿ ನಂ.2 ರವರು ಈಗ ಎರಡು ವರ್ಷ ಹಿಂದಿನವರೆಗೆ ಒಟ್ಟು ಕುಟುಂಬದಲ್ಲಿ ವಾಸ ಇದ್ದರು ಎಂದರೆ ನನಗೆ ಗೊತ್ತಿಲ್ಲ. ವಾದಿ ಮತ್ತು ಪ್ರತಿವಾದಿಗಳು ಯಾರು ಯಾರು ಕೂಡಿ ಇದ್ದರು ಎನ್ನುವ ವಿಚಾರ ನನಗೆ ಗೊತ್ತಿಲ್ಲ. ಪ್ರತಿವಾದಿ ನಂ.2 ರವರಿಗೆ ಎಷ್ಟು ಆದಾಯ ಇದೆ ಯಾವ ಮೂಲದಿಂದ ಆದಾಯ ಇದೆ ನನಗೆ ಗೊತ್ತಿಲ್ಲ. ಪ್ರತಿವಾದಿ ನಂ.2 ರವರು ಎಂದಿಗೂ ಹೊಲಕ್ಕೆ ಬಂದಿರಲಿಲ್ಲ ವಾದಿ ಹಾಗೂ ಪ್ರತಿವಾದಿ ನಂ.5 ರವರು ಹೊಲದಲ್ಲಿ ಸಾಗುವಳಿ ಮಾಡುತ್ತಾ ಸ್ವಾಧೀನದಲ್ಲಿ ಇದ್ದರು ಎಂದರೆ ನನಗೆ ಗೊತ್ತಿಲ್ಲ. ನನಗೆ ಪ್ರತಿವಾದಿ ನಂ.2 ರವರು ತಾನು ಹೊಲ ಮಾಡುತ್ತೇನೆ ಎಂದು ತಿಳಿಸಿದ್ದರು ಅದನ್ನು ಬರೆಸಿದ್ದೇನೆ. ಪ್ರತಿವಾದಿ ನಂ.2 ರವರು ಪ್ರಮಾಣ ಪತ್ರದಲ್ಲಿ ಈ ರೀತಿ ನಾನು ಸಾಗುವಳಿ ಮಾಡುತ್ತಿದ್ದೇನೆ ಎಂದು ಬರೆಸು ಎಂದು ನನಗೆ ಹೇಳಿದ್ದರಿಂದ ನಾನು

ಅವರ ಮಾತು ಕೇಳಿ ಸುಳ್ಳು ವಿಷಯ ಬರೆಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.2 ರಮರ ಸಾಗುವಳಿ ಮಾಡುತ್ತಿದ್ದರು ಎಂದು ಹೇಳಲು ನಾನು ಖುದ್ದಾಗಿ ಅವರನ್ನು ಸಾಗುವಳಿ ಮಾಡುವುದನ್ನು ನೋಡಿಲ್ಲ. ಯಾವ ಕಾರ್ಖಾನೆಗೆ ಎಷ್ಟು ಬೆಳೆ ಪ್ರತಿವಾದಿ ನಂ.2 ರವರ ಹೆಸರಿನಲ್ಲಿ ಕಳುಹಿಸಲಾಗಿದೆ ನನಗೆ ಗೊತ್ತಿಲ್ಲ. ಪ್ರತಿವಾದಿ ನಂ.2 ಹಾಗೂ ಅವರ ಹೆಂಡತಿಗೆ ಎಷ್ಟು ವೇತನ, ಆದಾಯ ಇತ್ತು ನನಗೆ ಗೊತ್ತಿಲ್ಲ. ಪ್ರತಿವಾದಿ ನಂ.2 ರವರು ಯಾವುದೇ ಕೆಲಸ ಮಾಡುತ್ತಿರಲಿಲ್ಲ ಅವರಿಗೆ ಆದಾಯ ಇರಲಿಲ್ಲ ವಾದಿ ಹಾಗೂ ಪ್ರತಿವಾದಿ ನಂ.5 ರವರು ದುಡಿದು ಸಾಗುವಳಿ ಮಾಡಿ, ಬಂದ ಬೆಳೆಯ ಆದಾಯದಿಂದ ಪ್ರತಿವಾದಿ ನಂ.2 ರವರ ಹೆಸರಿನಲ್ಲಿ ಆಸ್ತಿಗಳನ್ನು ಖರೀದಿ ಹಿಡಿದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ವಾದಿ ಹಾಗೂ ಪ್ರತಿವಾದಿಗಳ ಕುಟುಂಬದ ಹಾಗೂ ಆಸ್ತಿಗಳ ಕುರಿತು ಏನು ಗೊತ್ತಿಲ್ಲ ಪ್ರತಿವಾದಿ ನಂ.2 ನನ್ನ ಸ್ನೇಹಿತ ಅವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಪ್ರತಿವಾದಿ ನಂ.3 ಪರ ವಕೀಲರು ವಾದಿ ಪರ ವಕೀಲರು ಕೇಳಿರುವ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಕೋರಿದ್ದು ಅನುಮತಿಸಲಾಯಿತು)**

**ಮರು ವಿಚಾರಣೆಃ ಇಲ್ಲ.**

(ಈ ಮೇಲಿನ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಆಧರಿಸಿ ನಾನು ಹೇಳಿದಂತೆ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ. ಸರಿ ಅದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,**
**ಖಾನಾಪೂರ**